3. ಅಧ್ಯಕ್ಷರ ಅಪ್ಪಣೆ ಮೇರೆಗೆ

ಅಧ್ಯಕ್ಷರು: ನಾರಾಯಣಸ್ವಾಮಿಯವರೇ, ನಿಮ್ಮ ಪ್ರಸ್ತಾವನೆಗೆ ಇನ್ನೂ ಉತ್ತರ ಬಂದಿಲ್ಲ. ಉತ್ತರ ಬಂದ ಮೇಲೆ ತೆಗೆದುಕೊಳ್ಳೋಣ. ಉತ್ತರ ಬೇಡದಿದ್ದರೆ ಈಗಲೇ ಪ್ರಸ್ತಾಪ ಮಾಡಿ, ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಎ.ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೇ, ವಿಷಯ ಬಹಳ ಮುಖ್ಯವಾದುದು. ಶಾಲಾ ಮಕ್ಕಳಿಗೆ ಕೊಡುವಂಥ ಸುಮಾರು 8 ಲಕ್ಷ ರೂಪಾಯಿಗಳ ಅಕ್ಕಿಯನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಈ ಪ್ರಶ್ನೆಯನ್ನು ನಾನು ರೆಡ್ ಷೀಟ್‌ನಲ್ಲಿ ಕಳುಹಿಸಿದ್ದೇನೆ. ಇನ್ನೂ ಉತ್ತರ ಬಂದಿಲ್ಲವೆಂದು ಹೇಳಿದರೆ ಹೇಗೆ? ಇದು ಬಹಳ ಗಂಭೀರವಾದ ವಿಷಯ.

ಅಧ್ಯಕ್ಷರು: ಉತ್ತರ ಬಂದಿಲ್ಲವೆಂದು ಹೇಳಿದ್ದೇನೆ. ಸೀರಿಯಸ್ ಮ್ಯಾಟರ್, ಅದನ್ನು ಈಗಲೇ ಪ್ರಸ್ತಾಪ ಮಾಡಬೇಕು ಎಂದರೆ ನಾನು ಅವಕಾಶ ಕೊಡುತ್ತಿದ್ದೇನೆ. ನೀವು ಪ್ರಸ್ತಾಪ ಮಾಡಿ. ಮಂತ್ರಿಗಳಿದ್ದರೆ ಉತ್ತರ ಹೇಳಿ. ಇಲ್ಲದಿದ್ದರೆ ಉತ್ತರ ಕೊಡುವಂಥ ಆಬ್ಲಿಗೇಷನ್ ಇಲ್ಲ.

ಅ) ವಿಷಯ: ಶಾಲಾ ಮಕ್ಕಳಿಗೆ ವಿತರಿಸುವ ಅಕ್ಕಿ ದುರುಪಯೋಗವಾಗಿರುವ ಬಗ್ಗೆ.

+ ಶ್ರೀ ಎ.ನಾರಾಯಣಸ್ವಾಮಿ(ಆನೇಕಲ್): ಮಾನ್ಯ ಅಧ್ಯ
ಟಿ.ಎ.ಪಿ.ಎಂ.ಸಿ.ಯಿಂದ ಸೊಸೈಟಿಗಳ ಮುಖಾಂತರ ಶಾಲಾ ಮಕ್ಕಳಿಗೆ ತಿಂ
ಮೂರು ಕೆ.ಜಿ ಅಕ್ಕಿಯನ್ನು ಕೊಡುತ್ತಾರೆ. ಕಳೆದ ಆರು ತಿಂಗ
ಟಿ.ಎ.ಪಿ.ಎಂ.ಸಿ.ಯಿಂದ ಶಾಲೆಗಳಿಗೆ ಅಕ್ಕಿ ವಿತರಣೆಯಾಗಿಲ್ಲ. ಕೆಲವು ಶಾಲೆಗಳಿಂ
ವಿತರಣೆಯಾಗಿದೆ ಎಂದು ರಿಪೋರ್ಟ್ ಬರೆಸಿಕೊಂಡಿದ್ದಾರೆ. ಈ ವಿಚಾರ
ಗೊತ್ತಾದಾಗ ನಾನು ಟಿ.ಎ.ಪಿ.ಎಂ.ಸಿ.ಗೆ ಹೋಗಿ ಸಂಬಂಧಪಟ್ಟ ಅಧಿಕಾರಿ
ಕರೆಸಿ, ಏಕೆ ಶಾಲಾ ಮಕ್ಕಳಿಗೆ ಅಕ್ಕಿ ಕೊಟ್ಟಿಲ್ಲ? ಯಾವ ತಿಂಗಳಿಂದ ಕೊಟ್ಟಿಲ್ಲ? ಕೆ
ಸರ್ಕಾರದಿಂದ ಅಕ್ಕಿ ಬಂದಿಲ್ಲವೇ? ಅಥವಾ ರಾಜ್ಯ ಸರ್ಕಾರ
ವಿತರಣೆಯಾಗಿಲ್ಲವೇ ಎಂದು ಪ್ರಶ್ನೆ ಮಾಡಿದಾಗ, ತನಿಖೆ ಮಾಡಿದಾಗ 650 ಮ
ಅಕ್ಕಿಯನ್ನು ಶಾಲಾ ಮಕ್ಕಳಿಗೆ ಕೊಡದೆ ತಿಂದು ಹಾಕಿರುವುದು ತಿಳಿದು ಬಂತು.
ಮೂಟೆ ಅಕ್ಕಿ ಲ್ಯಾಪ್ಸ್ ಆಗಿದೆ, ಗೋಡೌನ್‌ನಲ್ಲಿ ಇಲ್ಲ ಎಂದು ಸಂಬಂಧ
ನಿರ್ದೇಶಕರೂ ವರದಿ ಮಾಡಿದ್ದಾರೆ. ಈ ಬಗ್ಗೆ ತನಿಖೆಯಾಗಿ ಜಿಲ್ಲಾಧಿಕಾರಿ
ರಿಪೋರ್ಟ್ ಹೋಯಿತು. ಜಿಲ್ಲಾಧಿಕಾರಿಗಳು ಆ ಬೋರ್ಡನ್ನು ವಜಾ ಮಾಡಿ
ಪ್ರತಿ ತಿಂಗಳು ತಾಲ್ಲೂಕು ಕಛೇರಿಯಲ್ಲಿ ತಹಸೀಲ್ದಾರ್‌ಗಳು, ಫುಡ್ ಇನ್ಸ್‌ಪೆಕ್ಟರ
ಹೀಗೆ ಎಲ್ಲ ಅಧಿಕಾರಿಗಳ ಸಭೆಯನ್ನು ಕರೆಯುತ್ತಾರೆ. ಅಕ್ಕಿ ವಿತರಣೆಯಾಗಿಲ್ಲ, ಅ

ಹಾಕಿದ್ದಾರೆ, ಕಾಳಸಂತೆಯಲ್ಲಿ ಮಾರಾಟ ಮಾಡಿಕೊಂಡಿದ್ದಾರೆ ಎನ್ನುವುದು ಎಲ್ಲ ಅಧಿಕಾರಿಗಳಿಗೆ ಗೊತ್ತಿದೆ. ಆದರೂ ಇದುವರೆಗೂ ಯಾವುದೇ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಏಕೆ ಕ್ರಮ ತೆಗೆದುಕೊಂಡಿಲ್ಲ? ಇದರಲ್ಲಿ ಯಾರ್ಯಾರು ಶಾಮೀಲಾಗಿದ್ದಾರೆ? ಇದಕ್ಕೆ ಸರ್ಕಾರ ಹೊಣೆಯಲ್ಲವೇ? ಮಂತ್ರಿಗಳು ಏನು ಮಾಡುತ್ತಿದ್ದಾರೆ? ಇದು ಪತ್ರಿಕೆಯಲ್ಲೂ ಬಂದಿದ್ದು, ಅಧಿಕಾರಿಗಳು ಇನ್ಸ್‌ಪೆಕ್ಷನ್ ಮಾಡಿದ್ದಾರೆ, ಈ ಬಗ್ಗೆ ವರದಿ ಸಹಾ ಇದೆ. ದಯವಿಟ್ಟು ಈ ಬಗ್ಗೆ ಮಂತ್ರಿಗಳು ಸಮಂಜಸವಾದ ಉತ್ತರವನ್ನು ಕೊಡಬೇಕು ಮತ್ತು ಯಾರ್ಯಾರು ಶಾಮೀಲಾಗಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ: ಮೊದಲೇ ಒಂದು ನೋಟೀಸ್ ಕಳುಹಿಸಿದ್ದರೆ ಉತ್ತರವನ್ನು ಸಿದ್ಧ ಮಾಡಬಹುದಿತ್ತು.

ಅಧ್ಯಕ್ಷರು: ಸಂಬಂಧಪಟ್ಟ ಮಂತ್ರಿಗಳಿಗೆ ಕಳುಹಿಸಿದ್ದಾರೆ. ಬಹುಶಃ ಮಂತ್ರಿಗಳು ಆ ಮನೆಯಲ್ಲಿದ್ದಾರೇನೋ ಗೊತ್ತಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ: ನನಗೆ ಕಾಪಿ ಬಂದಿಲ್ಲ.

ಶ್ರೀ ಡಿ.ವಿ.ಸದಾನಂದಗೌಡ: ಮೊದಲೇ ನೋಟೀಸ್ ಕಳುಹಿಸಬೇಕಾಗಿತ್ತು ಎಂದು ಸನ್ಮಾನ್ಯ ಕಾನೂನು ಸಚಿವರು ಹೇಳಿದರು. ಸುಮಾರು 10 ದಿವಸಗಳ ಹಿಂದೆಯೇ ಸಂಬಂಧಪಟ್ಟ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇವೆ ಎಂದು ಅಧ್ಯಕ್ಷರೇ ಹೇಳಿದರು. ಸೌಜನ್ಯಕ್ಕಾಗಿಯಾದರೂ ಉತ್ತರವನ್ನು ಅಧ್ಯಕ್ಷರ ಕಛೇರಿಗೆ ಕಳುಹಿಸಿಕೊಡಬೇಕಾಗಿತ್ತು. ನಿಮಗೆ ಆ ಸೌಜನ್ಯವೂ ಇಲ್ಲವೆಂದರೆ ಹೇಗೆ? ಗಂಭೀರವಾದಂಥ ಒಂದು ವಿಷಯವನ್ನು ಅವರು ಪ್ರಸ್ತಾಪ ಮಾಡುತ್ತಿದ್ದಾರೆ, ಶಾಲಾ ಮಕ್ಕಳಿಗೆ ಕೊಡಬೇಕಾದ ಅಕ್ಕಿ ವಿತರಣೆಯಾಗಿಲ್ಲ, ಅಧಿಕಾರಿಗಳು ತಿಂದು ಹಾಕಿದ್ದಾರೆ ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ತಂದಾಗ ಕೂಡ ಅದಕ್ಕೆ ಉತ್ತರ ಕೊಡಲಿಲ್ಲವೆಂದರೆ ಹೇಗೆ? ನಮ್ಮ ಸದಸ್ಯರು ಅಷ್ಟು ಉದ್ವೇಗಗೊಳ್ಳಲು ಕಾರಣವೇನೆಂದರೆ ಒಂದು ಸಾಮಾನ್ಯ ಮಗುವಿಗೆ ಸಿಗಬೇಕಾದಂಥ ವ್ಯವಸ್ಥೆಯ ಬಗ್ಗೆಯೂ ಸರ್ಕಾರ ಕಾಳಜಿ ತೋರಿಸುವುದಿಲ್ಲವೆಂದರೆ ಹೇಗೆ?

ಶ್ರೀ ಡಿ.ಬಿ.ಚಂದ್ರೇಗೌಡ: ಶಾಸನದಲ್ಲಿ ಬೇರೆ ರೀತಿಯ ಅವಕಾಶಗಳಿವೆ. ಆ ಅವಕಾಶಗಳನ್ನು ಬಳಕೆ ಮಾಡಿಕೊಂಡು ಈ ಸದನದಲ್ಲಿ ವಿಷಯಗಳನ್ನು ಪ್ರಸ್ತಾಪ ಮಾಡಿ. ಆಗ ನಾವು ತಕ್ಷಣ ಉತ್ತರ ಕೊಡಲೇ ಬೇಕಾಗುತ್ತದೆ. ಪ್ರಶ್ನೆ ಮುಖಾಂತರ ಕಳುಹಿಸಿ, ಶಾರ್ಟ್ ನೋಟೀಸ್ ಪ್ರಶ್ನೆ ಕಳುಹಿಸಿ, ನಿಲುವಳಿ ಸೂಚನೆ ಮುಖಾಂತರ ಕಳುಹಿಸಿ.

ಅಧ್ಯಕ್ಷರು: ಮಂತ್ರಿಗಳು ಬಂದಾಗ ಉತ್ತರ ಕೊಡುತ್ತಾರೆ.

ಶ್ರೀ ಎ.ರಾಮದಾಸ್: ಮಾನ್ಯ ಸಭಾಧ್ಯಕ್ಷರೇ, ಪ್ರಶ್ನೆಯನ್ನು ಕಳುಹಿಸಿಕೊಟ್ಟು ಉತ್ತರ ಕೊಡಿ ಎಂದು ಆದೇಶ ಮಾಡಿದ್ದಾರೆ. ಉತ್ತರ ಬಂದಿದೆ ಎಂದು ಅದರ ಮೇಲೆ ಇದೆ. ಬಂದ ನಂತರವೂ ಸದನದಲ್ಲಿ ಉತ್ತರ ಹೇಳುವಂಥ ವ್ಯವಸ್ಥೆ ಇಲ್ಲವೆಂದರೆ ಹೇಗೆ?

ಅಧ್ಯಕ್ಷರು: ಅವರು ಪ್ರಸ್ತಾಪ ಮಾಡಿದ್ದಾರೆ, ಉತ್ತರ ಕೊಡುವುದು ಸರ್ಕಾರಕ್ಕೆ ಸಂಬಂಧಪಟ್ಟಂಥಾದ್ದು. ದಯವಿಟ್ಟು ನೀವು ಕುಳಿತುಕೊಳ್ಳಿ.

ಶ್ರೀ ಡಿ.ಬಿ.ಚಂದ್ರೇಗೌಡ: ಬಾಯಿಗೆ ಬಂದ ಹಾಗೆ ಕೂಗುವುದಕ್ಕಲ್ಲ ಈ ಸಭೆ ಇರುವುದು. ಸರ್ಕಾರಕ್ಕೂ ಜವಾಬ್ದಾರಿ ಇದೆ. ನಿಯಮಗಳ ಪ್ರಕಾರ ಕೇಳುವುದಕ್ಕೆ ನಿಮಗೆ ಅವಕಾಶವಿದೆ. ಇಲ್ಲದಿದ್ದರೆ ನಿಯಮಗಳ ಈ ಪುಸ್ತಕವನ್ನು ಸುಟ್ಟು ಹಾಕಿ ಬಿಡೋಣ. ನಿಯಮಗಳನ್ನು ಬಳಕೆ ಮಾಡಿಕೊಳ್ಳದೇ....

ಶ್ರೀ ಎ.ರಾಮದಾಸ್: ನಿಯಮಗಳ ಅಡಿಯಲ್ಲೇ ಶೂನ್ಯ ವೇಳೆ ಪ್ರಸ್ತಾಪವನ್ನು ಕಳುಹಿಸಿದ್ದಾರೆ. ಉತ್ತರ ಬಂದಿದೆ ಎಂದು ಅದರ ಮೇಲೆ ಬರೆದಿದ್ದಾರೆ.

ಅಧ್ಯಕ್ಷರು: ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಇಲ್ಲದೇ ಇರುವಾಗ, ಉತ್ತರ ಕೊಡಿ ಎಂದು ನೀವು ಸರ್ಕಾರಕ್ಕೆ ಒತ್ತಾಯ ಮಾಡುವ ಹಾಗಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ: ಶೂನ್ಯವೇಳೆಯಲ್ಲಿ ಎತ್ತತಕ್ಕಂಥ ವಿಷಯಗಳಿಗೆ ಉತ್ತರ ಕೊಡುವ ಹಾಗೆ ಸರ್ಕಾರದ ಮೇಲೆ ಒತ್ತಡ ತರಲು ಆಗುವುದಿಲ್ಲ. ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿ ಉತ್ತರ ಹೇಳಲಿಲ್ಲವೆಂದರೆ ಹೇಗೆ?

ಅಧ್ಯಕ್ಷರು: ಈಗ ಮಂತ್ರಿಗಳು ಸದನದಲ್ಲಿ ಇಲ್ಲ, ಉತ್ತರ ಕೊಡಲು ಆಗುವುದಿಲ್ಲ ಎಂದು ಮೊದಲೇ ಹೇಳಿದೆನಲ್ಲ. ನೀವು ಕೇವಲ ವಿಷಯವನ್ನು ಪ್ರಸ್ತಾಪಿಸಬಹುದು ಅಷ್ಟೇ.

(ಗೊಂದಲ)

(ಈ ಹಂತದಲ್ಲಿ ಸದಸ್ಯರಾದ ಎ.ನಾರಾಯಣಸ್ವಾಮಿಯವರು ಸದನದ ಬಾವಿಗೆ ಧರಣಿ ನಡೆಸಲು ಬಂದರು)

ಶ್ರೀ ಡಿ.ಬಿ.ಚಂದ್ರೇಗೌಡ: ಸದಸ್ಯರ ನಡವಳಿಕೆಗೂ ಒಂದು ಮಿತಿ ಇರುತ್ತದೆ.

ಅಧ್ಯಕ್ಷರು: ಪ್ರತಿಯೊಂದು ಸಣ್ಣ ವಿಷಯಕ್ಕೂ ಇಲ್ಲಿ ಬಂದು ಕುಳಿತುಕೊಂಡರೆ ಹೇಗೆ? ಇದು ಸಂಸದೀಯ ನಡವಳಿಕೆಯಲ್ಲ. ಉತ್ತರ ಕೊಡಲು ಮಂತ್ರಿಗಳು ಈಗ

ಇಲ್ಲಿ ಇಲ್ಲವೆಂದು ಹೇಳಿದರೂ ಮತ್ತೆ ಅದನ್ನೇ ಕೇಳುತ್ತಿದ್ದರೆ ಹೇಗೆ?

(ಎ.ನಾರಾಯಣಸ್ವಾಮಿಯವರು ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)

ಶ್ರೀ ಡಿ.ಬಿ.ಚಂದ್ರೇಗೌಡ: ಸುರೇಶ್ ಕುಮಾರ್‌ರವರೇ, ಇದನ್ನು ನೀವು ಸರಿಪಡಿಸದಿದ್ದರೆ ಖಂಡಿತಾ ಶಾಸನಸಭೆಗೆ ಗೌರವ ಬರುವುದಿಲ್ಲ.

ಅಧ್ಯಕ್ಷರು: ಮಂತ್ರಿಗಳು ಬಂದ ಮೇಲೆ ಉತ್ತರ ಕೊಡಿಸುತ್ತೇನೆ ಎಂದು ಹೇಳಿದರೂ ಅವರು ಇಲ್ಲದೇ ಇದ್ದಾಗ ಏಕೆ ಪ್ರಸ್ತಾಪ ಮಾಡಬೇಕು? ಈಗ ಮುಂದಿನ ವಿಷಯ, ಸಿಂಧ್ಯಾರವರೇ ನೀವು ಪ್ರಸ್ತಾಪ ಮಾಡಿ.

12-30 ಪಿ.ಎಂ

ಆ) ವಿಷಯ: ರಾಜ್ಯದ ಹೆದ್ದಾರಿಗಳಲ್ಲಿ ಅಪಘಾತಗಳು ಹೆಚ್ಚುತ್ತಿರುವುದು.

+ ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಕೋರಿ ಬಹಳ ಆತಂಕಕಾರಿಯಾದಂಥ ಒಂದು ವಿಚಾರದ ಬಗ್ಗೆ ಮಾನ್ಯ ಸಾರಿಗೆ ಸಚಿವರು ಹಾಗೂ ಮಾನ್ಯ ಗೃಹ ಇಲಾಖೆಯ ಮಂತ್ರಿಗಳ ಗಮನವನ್ನು ಸೆಳೆಯಲಿಕ್ಕೆ ಈ ಸಂದರ್ಭದಲ್ಲಿ ಬಯಸುತ್ತೇನೆ. ಏಕೆಂದರೆ ಇದು ಕೇವಲ ಸರ್ಕಾರಕ್ಕಷ್ಟೇ ಸಂಬಂಧಪಟ್ಟಂತಹ ವಿಚಾರವಲ್ಲ. ಕಾರಣವೇನೆಂದರೆ, ರಾಜ್ಯದಲ್ಲಿ ಕಳೆದ 2-3 ತಿಂಗಳುಗಳಲ್ಲಿ ಅಪಘಾತಗಳು ಬಹಳ ದೊಡ್ಡ ಸಂಖ್ಯೆಯಲ್ಲಿ ಆಗುತ್ತಿವೆ. ಬಿಜಾಪುರ ಜಿಲ್ಲೆಯಲ್ಲಿ ಒಂದೇ ಕುಟುಂಬಕ್ಕೆ ಸೇರಿದ ಸುಮಾರು 13 ಜನರು ಸತ್ತು ಹೋಗಿದ್ದಾರೆ. ಇವತ್ತು ನಮ್ಮ ರಾಜ್ಯದ ಪ್ರಮುಖ ದಿನಪತ್ರಿಕೆಯಾದ ಪ್ರಜಾವಾಣಿಯಲ್ಲಿ ಬಂದಿರುವಂಥ ಆ ಧಾರುಣವಾದ ದೃಶ್ಯವನ್ನು ನೋಡಿದರೆ ಎಂಥವರ ಮನಸ್ಸು ಸಹ ಕರಗುತ್ತದೆ. ಹೀಗೆ ದಿನಕ್ಕೊಂದರಂತೆ ಅಪಘಾತವಾಗಿ ಹತ್ತಾರು ಸಾವುಗಳು ಆಗುತ್ತಿವೆ. ನನಗೆ ತಿಳುವಳಿಕೆ ಇರುವ ಹಾಗೆ ನಮ್ಮ ರಾಜ್ಯದಲ್ಲಿ ಪ್ರತೀ ವರ್ಷ ಸುಮಾರು ಮೂರರಿಂದ ಮೂರೂವರೆ ಸಾವಿರ ಜನರು ಅಪಘಾತಗಳಲ್ಲಿ ಸಾಯುತ್ತಾರೆ. ಆದರೆ ಕಳೆದ 2-3 ತಿಂಗಳುಗಳಲ್ಲಿ ಅಪಘಾತಗಳು ಏಕೆ ಹೆಚ್ಚಾಗುತ್ತಿವೆ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಸಾಮಾನ್ಯವಾಗಿ ಮಳೆಗಾಲ ಪ್ರಾರಂಭವಾಗಿ ಮೇ, ಜೂನ್, ಜುಲೈ ತಿಂಗಳುಗಳಲ್ಲಿ ಜಡಿಮಳೆ ಇರುವುದರಿಂದ ಇಂಥ ಸಂದರ್ಭಗಳಲ್ಲಿ ಅಪಘಾತಗಳು ಹೆಚ್ಚಾಗುತ್ತವೆ. ದಿನಕ್ಕೆ 10 ರಿಂದ 15 ಜನ ಅಪಘಾತಗಳಲ್ಲಿ ಸಾಯುತ್ತಾರೆಂದರೆ ಈ ತಿಂಗಳುಗಳಲ್ಲಿ ಏನೇನು ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಶ್ರೀ ದಿನಕರ್ ಅವರು ಡಿ.ಐ.ಜಿ. ಆಗಿದ್ದಂಥ ಸಂದರ್ಭದಲ್ಲಿ ಒಂದು ರಿಪೋರ್ಟ್‌ನ್ನು ಸರ್ಕಾರಕ್ಕೆ ಸಬ್‌ಮಿಟ್ ಮಾಡಿದ್ದಾರೆ. ಇನ್ನು ಮ್ಯಾಕ್ಸಿಕ್ಯಾಬ್ ಮತ್ತು ಟೆಂಪೋಗಳಿಗೆ 10 ರಿಂದ 15 ಜನರನ್ನು